Sri B. BASAVALINGAPPA.—Government has not received any tangible complaint that this 6 cusecs of water would affect the achkatdars.

Sri N. G. HALAPPA.—Since the Government considers that the quantity of water required from the Canal for Davanagere City is meagre, and since there is scarcity of drinking water in Channagiri, will Government supply water from this Canal to Channagiri also ?

Sri B. BASAVALINGAPPA.—Although this supplementary does not pertain to this Question, I would like to answer that Channagiri Municipality has requested Government to draw water from irrigation canals. My friend who is so much interested in achkatdars and who objected to drawing water from irrigation canals for drinking, now wants that some water which he considers negligible, could be drawn from the Canal to Channagiri ! Any way, that is being examined.

SCHOLARSHIPS TO YOUNG KANNADA ARTISTS

97. Sri K. H. HANUME GOWDA (Hassan) :—

Will the Minister for Education be pleased to state :—

whether there is any proposal before Government to give scholarships to encourage young Kannada artists to study in the Cine-Film Institutes, Poona ?

Sri A. R. BADARINARAYANA (Minister for Education) :—

In order to encourage the students of Mysore studying in the Film and Television Institute, Poona scholarships are being sanctioned already.

ಶ್ರೀ ಕೆ. ಎಚ್. ಹನುಮೇಗೌಡ: ಪ್ರತಿ ವರ್ಷ ಎಷ್ಟು ಜನ ಕಲಾವಿದರಿಗೆ ಸ್ಕಾಲರ್‌ಷಿಪ್ ಕೊಡುತ್ತಿದ್ದೀರಿ. ಇದರಿಂದ ಸರ್ಕಾರಕ್ಕೆ ವರ್ಷ ಒಂದಕ್ಕೆ ಎಷ್ಟು ಖರ್ಚು ಬರುತ್ತದೆ ?

ಶ್ರೀ ಎ. ಆರ್. ಬದರೀನಾರಾಯಣ: ಮೊದಲು ವರ್ಷಕ್ಕೊಂದಕ್ಕೆ ಎಂಬುದು ವಿದ್ಯಾರ್ಥಿವೇತನಗಳನ್ನು ಕೊಡಲಾಗುತ್ತಿತ್ತು. ಈಗ ನಾಲ್ಕು ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದೇವೆ ತಿಂಗಳಿಗೆ ಒಬ್ಬರಿಗೆ 120 ರೂಪಾಯಿಗಳ ಪ್ರಕಾರ ಕೊಡುತ್ತಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ:—ಪುಣೆಯ ಚಲನಚಿತ್ರ ಮತ್ತು ಟೆಲಿವಿಷನ್ ಇನ್ಸ್‌ಟಿಟ್ಯೂಟಿನಲ್ಲಿ ಕೆಲಸಮಾಡಿ ಬಂದಂಥ ನಮ್ಮ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಮ್ಮ ರಾಜ್ಯದ ಚಲನಚಿತ್ರ ವಿಭಾಗದಲ್ಲಿ ಮತ್ತು ಇನ್‌ಫರ್‌ಮೇಷನ್ ವಿಭಾಗದಲ್ಲಿ ಎಷ್ಟು ಜನರಿಗೆ ಕೆಲಸ ಕಲ್ಪಿಸಿಕೊಟ್ಟಿದ್ದೀರಿ.

ಶ್ರೀ ಎ. ಆರ್. ಬದರೀನಾರಾಯಣ.—ಇಲ್ಲಿ ಪ್ರಶ್ನೆ ಇರತಕ್ಕಂಥದ್ದು ವಿದ್ಯಾರ್ಥಿವೇತನಕ್ಕೆ ಸಂಬಂಧಪಟ್ಟಂತೆ. ಆದ್ದರಿಂದ ಮಾನ್ಯ ಸದಸ್ಯರು ಕೇಳಿದ ವಿವರಗಳು ನನ್ನ ಹತ್ತಿರ ಇಲ್ಲ.

ಶ್ರೀ ಕೆ. ಆರ್. ಎಸ್. ನಾಯಿಡು.—ನಮ್ಮ ರಾಜ್ಯದಲ್ಲಿ ಸಾಕಷ್ಟು ಮಂದಿ ಕಲಾವಿದರು ಇರುವುದರಿಂದ ಕಿರಿಯ ಕಲಾವಿದರಿಗೆ ಪ್ರೋತ್ಸಾಹ ನೀಡುವ ದೃಷ್ಟಿಯಿಂದ ಪುಣೆಗೆ ಕಳಿಸುವ ಬದಲು ನಮ್ಮ ರಾಜ್ಯದಲ್ಲಿಯೇ ಅಂತಹ ಒಂದು ಇನ್ಸ್‌ಟಿಟ್ಯೂಟನ್ನು ಸ್ಥಾಪನೆ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ನಮ್ಮ ರಾಜ್ಯದಲ್ಲಿಯೇ ಒಂದು ಇನ್ಸ್‌ಟಿಟ್ಯೂಟನ್ನು ಸ್ಥಾಪನೆ ಮಾಡಬೇಕು ಎಂದು ಮಾನ್ಯ ಸದಸ್ಯರು ಸಲಹೆ ಮಾಡಿದ್ದಾರೆ. ಅದನ್ನು ಗಮನಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ವಿದ್ಯಾರ್ಥಿವೇತನಗಳನ್ನು ಕೊಡುವ ವಿಚಾರದಲ್ಲಿ ಚುನಾಯಿಸುವವರು ಯಾರು ?

ಶ್ರೀ ಎ. ಆರ್. ಬದರೀನಾರಾಯಣ.—ನಾವು ಇಷ್ಟು ಸ್ಕಾಲರ್‌ಷಿಪ್ ಕೊಡುತ್ತೇವೆ, ತಾವು ಚುನಾಯಿಸಿ ಎಂದು ಒಂದು ಸರ್ಕಾರೀ ಆರ್ಡರನ್ನು ಪುಣೆಯ ಇನ್ಸ್‌ಟಿಟ್ಯೂಟನವರಿಗೆ ಕಳಿಸಿ ಕೊಡುತ್ತೇವೆ. ಅವರು ಫಸ್ಟ್ ಟಮ್ರ್ ಪರೀಕ್ಷೆ ಮಾಡಿದ ಮೇಲೆ, ಅದರಲ್ಲಿಯಾರು ಚೆನ್ನಾಗಿ ಪಾಸ್ ಮಾಡಿರುತ್ತಾರೋ ಅಂಥವರಿಗೆ ಕೊಡಬಹುದು ಎಂದು ಶಿಫಾರಸ್ ಮಾಡಿದ ಮೇಲೆ ನಾವು ಕೊಡುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—ಎಷ್ಟು ಜನ ವಿದ್ಯಾರ್ಥಿಗಳು ಅಲ್ಲಿ ಸ್ಟಡಿ ಮಾಡುತ್ತಿದ್ದಾರೆ ಮತ್ತು ಎಷ್ಟು ಜನಕ್ಕೆ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದೀರಿ ?

ಶ್ರೀ ಎ. ಆರ್. ಬದರಿನಾರಾಯಣ.—ನಾಲ್ಕು ಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳನ್ನು ಕೊಡುತ್ತಿದ್ದೇವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಕಿರಿಯ ಕನ್ನಡ ಕಲಾವಿದರಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ ಮತ್ತು ಕನ್ನಡ ಕಲಾವಿದರಿಗೆ ಉತ್ತೇಜನ ಕೊಡುವ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿಯೆ ಇಂತಹ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡುವುದು ಉತ್ತಮವಲ್ಲವೆ ?

ಶ್ರೀ ಎ. ಆರ್. ಬದರೀನಾರಾಯಣ.—ಅದಕ್ಕೆ ಈಗಾಗಲೇ ಉತ್ತರ ಕೊಡಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಹೇಳಿದ ಹಾಗೆ ಈಗ ನಾಲ್ಕು ಜನಕ್ಕೆ ಮಾತ್ರ ಸ್ಕಾಲರ್‌ಷಿಪ್ಪು ಕೊಡುತ್ತೇವೆಂದು ಹೇಳಿರುವುದು ಬಹಳ ಕಡಿಮೆ ಎಂದು ತಮ್ಮ ಗಮನಕ್ಕೆ ಬಂದಿಲ್ಲವೇ ! ಇದನ್ನು ಇನ್ನೂ ಜಾಸ್ತಿ ಮಾಡಲು ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಕಡಿಮೆ ಎಂದು ನಮ್ಮ ಮನಸ್ಸಿಗೂ ಕಾಣುತ್ತದೆ. ಆದರೆ ಇದರಲ್ಲಿ ಪರೀಕ್ಷೆಗಳನ್ನು ಪಾಸು ಮಾಡಿದವರಿಗೆ ಮಾತ್ರ ಇಲ್ಲಿ ಅವಕಾಶ ಕೊಡುವುದು.

ಶ್ರೀ ಎಂ. ಬಿ. ರಾಮಸ್ವಾಮಿ.—ಇಂತಹ ಕಿರಿಯ ಕಲಾವಿದರಿಗೆ ವಿದ್ಯಾರ್ಥಿ ವೇತನಗಳನ್ನು ಕೊಡುವಾಗ ಮೆರಿಟ್‌ಗಿಂತ ಇನ್‌ಫ್ಲುಯೆನ್ಸ್ ಮಾಡಲಿಕ್ಕೆ ಅವಕಾಶವಿದೆ ಎಂದು ಕೇಳುತ್ತೇವೆ. ಇದರ ಬಗ್ಗೆ ತಕ್ಕ ಕಾರ್ಯಕ್ರಮ ಸರಕಾರದವರು ತೆಗೆದುಕೊಳ್ಳುತ್ತಿದ್ದಾರೆಯೇ ?

ಶ್ರೀ ಎ. ಆರ್. ಬದರೀನಾರಾಯಣ.—ಇದರಲ್ಲಿ ಇನ್‌ಫ್ಲುಯೆನ್ಸ್ ಪ್ರಶ್ನೆಯೇ ಬರುವುದಿಲ್ಲ. ಇಲ್ಲಿ ಎಕ್ಸಾಮಿನೇಷನ್ ಮಾಡುತ್ತಾರೆ ಮತ್ತು ಆ ಎಕ್ಸಾಮಿನೇಷನ್‌ನಲ್ಲಿ ಯಾರು ಚೆನ್ನಾಗಿ ಮಾಡಿದ್ದಾರೆ ಅದನ್ನು ತಿಳಿದುಕೊಂಡು ನಮ್ಮ ಸರಕಾರಕ್ಕೆ ಶಿಫಾರಸ್ಸನ್ನು ಕಳುಹಿಸುತ್ತಾರೆ. ಆ ಶಿಫಾರಸುಗಳ ಆಧಾರದ ಮೇಲೆಯೇ ಸರಕಾರ ಸ್ಕಾಲರುಷಿಪ್‌ಗಳನ್ನು ಕೊಡುವುದು. ಇದರಲ್ಲಿ ಇನ್‌ಫ್ಲುಯೆನ್ಸ್ ಎನ್ನುವುದು ಬಹಳ ದೂರವಾಯಿತು.

ಶ್ರೀ ಟಿ. ಎಂ. ಮಂಜುನಾಥ್.—ಸಂಗೀತ, ನಾಟಕ ಹಾಗೂ ನೃತ್ಯ ಇವುಗಳನ್ನು ಕಲಿಯುತ್ತಿರುವ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೂ ಇಲ್ಲಿನ ಸಂಗೀತ ನಾಟಕ ಅಕೆಡಮಿಗಳ ಮೂಲಕ ಸರಕಾರ ವಿದ್ಯಾರ್ಥಿವೇತನಗಳನ್ನೇಕೆ ಕೊಡಬಾರದು ?

ಶ್ರೀ ಎ. ಆರ್. ಬದರೀನಾರಾಯಣ.—ಇಲ್ಲಿರುವ ಪ್ರಶ್ನೆ ಬರೀ ಫಿಲಂ ಹಾಗೂ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಬಗ್ಗೆ ಮಾತ್ರ.

ಅಧ್ಯಕ್ಷರು.—117ನೇ ನಂಬರ್ ಪ್ರಶ್ನೆಯನ್ನು ಶ್ರೀ ವಿ. ಎಂ. ಘಾಡಿಯವರು ಕೇಳಬಹುದು.